



# ಕೃಷ್ಣ ಕಮಲ

■ ಸುನೀಲ್ ಬಾರ್ಕೂರ್
ಚಿತ್ರ: ವೆಂಕಟರಮಣ ಗೌಡ

**ಈ** ಹೂವನ್ನು ಮೊದಲ ಬಾರಿ ಕಂಡಾಗ ತಕ್ಷಣ ಮನಸಿಗೆ ಬರುವುದು ರಕ್ಷಾ ಬಂಧನದ ಸಮಯದಲ್ಲಿ ಮಕ್ಕಳ ಕೈಲಿ ಮಿರುಗುವ ಗೋಲಾಕಾರದ ಬ್ಯಾಗಡಿಯ ದೊಡ್ಡ ರಾಖಿ. ಕನ್ನಡದಲ್ಲಿ ಕೃಷ್ಣಕಮಲವೆಂದು ಕರೆಯಲ್ಪಡುವ ಈ ಪುಷ್ಪಕ್ಕೆ ಅದರ ವಿಶಿಷ್ಟವಾದ ರಚನೆಯಿಂದ ಹಲವಾರು ಹೆಸರುಗಳಿವೆ. ಇಂಗ್ಲೀಷಿನಲ್ಲಿ **blue passion flower** ಎಂದು ಹೇಳಲಾಗುವ ಈ ಉಪಜಾತಿಯು **passion flower** ಹೂವುಗಳ ಪ್ರಭೇದದ ಸುಮಾರು 530 ಕ್ಕೂ ಹೆಚ್ಚು ಉಪಜಾತಿಗಳಲ್ಲಿ ಒಂದು. **Passiflora Caerulea** ಇದರ ವೈಜ್ಞಾನಿಕ ಹೆಸರು. ಕುಕ್ಕಿಬೆಳ್ಳಿ ಕನ್ನಡದಲ್ಲಿ ಇನ್ನೊಂದು ಹೆಸರು.

ಹದಿನೈದರಿಂದ ಇಪ್ಪತ್ತು ಮೀಟರ್‌ವರೆಗೆ ಬೆಳೆಯುವ ಸಾಮರ್ಥ್ಯವುಳ್ಳ ಕೃಷ್ಣಕಮಲದ ಬಳ್ಳಿಯು ಮೇ ತಿಂಗಳಿಂದ ಜುಲೈವರೆಗೆ ಸ್ವಲ್ಪ ಹೆಚ್ಚು ಪ್ರಮಾಣದಲ್ಲಾದರೂ ವರ್ಷದ ಉಳಿದ ತಿಂಗಳಿನಲ್ಲೂ ಸಾಕಷ್ಟು ಹೂ ಬಿಡುತ್ತದೆ. ಕಲಾವಿದನೊಬ್ಬನ ಕಲಾಕೃತಿಯಂತಿರುವ ಈ ಹೂವುಗಳ ಪಕಳೆಗಳ ವೈವಿಧ್ಯ ಚಿತ್ತಾಕರ್ಷಕ. ಬಿಳಿ ಪಕಳೆಗಳ ಹಿನ್ನೆಲೆಯಲ್ಲಿ ನೀಲಿ ಮತ್ತು ಕೆನೆ ಬಣ್ಣದ ತೆಳು ಪಕಳೆಗಳ ಪ್ರಭಾವಳಿ ಅದರ ಮೇಲೆ ಕ್ರಮವಾಗಿ ಅಡ್ಡಲಾಗಿ ಐದು, ಉದ್ದವಾಗಿ ಒಂದು, ಮತ್ತೆ ಅಡ್ಡಲಾಗಿ ಮೂರು ತೆಳು ಕಾಂಡಗಳ ರಚನೆಯಿದೆ. ಈ ಪುಷ್ಪವನ್ನು, ಇದರ ಎಲೆಗಳನ್ನು ಔಷಧೀಯ ಗುಣಗಳಿಂದಾಗಿ ನೋವು ನಿವಾರಕವಾಗಿ ಮತ್ತು ನಿದ್ರಾಹೀನತೆಗೆ ಬಳಸುವುದುಂಟು.

ತನ್ನ ರಚನೆಯ ಕಾರಣದಿಂದ ಈ ಪುಷ್ಪಕ್ಕೆ ಹಲವು ಉಪಮೆಗಳಿವೆ. ಪ್ಯಾಶನ್ ಫ್ಲವರ್ ಎಂಬ ಹೆಸರಿಗೆ ಮೂಲ ಕಾರಣ ಪಾಶ್ಚಿಮಾತ್ಯ ದೇಶಗಳಲ್ಲಿ ನೂರರಷ್ಟು ಸಂಖ್ಯೆಯಲ್ಲಿರುವ ಈ ಹೂವಿನ ಬಿಳಿ ಮತ್ತು ನೀಲಿ ಪಕಳೆಗಳು, ಯೇಸುವಿನ ಹಣೆಗೆ ಕಟ್ಟಿದ್ದ ಮುಳ್ಳಿನ ಕಿರೀಟವೆಂದೂ, ಮಧ್ಯ ಭಾಗದಲ್ಲಿರುವ ಐದು ಪುಟ್ಟ ಕಾಂಡಗಳು ಆತನ ಮೈಮೇಲಿದ್ದ ಗಾಯಗಳೆಂದೂ, ಮತ್ತೆ ಮೂರು ಕಾಂಡಗಳು ಪವಿತ್ರ ಶಿಲುಬೆಗೇರಿಸುವಾಗ ಆತನ ಮೈಗೆ ಹೊಡೆದ ಮೊಳೆಗಳೆಂದು ಅರ್ಥೈಸುತ್ತಾರೆ. ಹಿಂದೂಗಳಲ್ಲಿ ಈ ಹೂವಿಗೆ 'ಪಾಂಡವರ ಹೂವು' ಎಂಬ ಹೆಸರಿದೆ.

ಇನ್ನು ಇದರ ಮುಳ್ಳುಗಳು ಗಡಿಯಾರದ ಘಂಟೆಯ ಮತ್ತು ಪಕಳೆಗಳು ನಿಮಿಷಗಳ ಗುರುತುಗಳನ್ನು ಹೋಲುವುದರಿಂದ ಗಡಿಯಾರ ಹೂವೆಂಬುದು ಇದರ ಇನ್ನೊಂದು ಹೆಸರು. ಯಾವುದೋ ಒಳ್ಳೆಯ ಘಳಿಗೆಯಲ್ಲೇ ಹುಟ್ಟಿರಬೇಕು. ಎಷ್ಟೊಂದು ಪುಣ್ಯವಂತರ ಹೆಸರನ್ನು ಪಡೆದುಕೊಂಡಿದೆ ನೋಡಿ!